# ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಕೆ.ಆರ್.ನಗರ

**Crl.Misc No.157/2019**
**RW : 1**

**ದಿನಾಂಕಃ 21-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರುಃ | ಕುಚೇಲ |
| ತಂದೆಯ ಹೆಸರುಃ | ಲೇಟ್ ಕೃಷ್ಣೇಗೌಡ |
| ವಯಸ್ಸುಃ | 55 ವರ್ಷ |
| ಉದ್ಯೋಗಃ | ಶಿಕ್ಷಕ |
| ವಾಸ ಸ್ಥಳಃ | ಸಾಲಿಗ್ರಾಮ |

**<u>ಮುಖ್ಯ ವಿಚಾರಣೆ ಎದುರುದಾರರ ಪರವಾಗಿಃ ಶ್ರೀ ಎಮ್.ಸಿ.ಎಸ್ ವಕೀಲರಿಂದಃ</u>**

1.ಅರ್ಜಿದಾರರು ಸಾಲಿಗ್ರಾಮದ ಮಹಾವೀರ ರಸ್ತೆಯಲ್ಲಿರುವ ನನ್ನ ಮನೆಯಲ್ಲಿಯೇ ವಾಸವಿದ್ದಾರೆ. ಇಲ್ಲಿಯವರೆಗೂ ನಾನು ಪ್ರತಿ ತಿಂಗಳು 8,000/- ಜೀವನಾಂಶ ವನ್ನು ನಾನು ಅರ್ಜಿದಾರರಿಗೆ ಕೊಡುತ್ತಾ ಬಂದಿರುತ್ತೇನೆ. ನಾನು ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತೇನೆ. ಅರ್ಜಿದಾರರು ಹಿಂದಿ ವಿಷಯದಲ್ಲಿ ಬಿ.ಎಡ್. ಪದವಿಯನ್ನು ಮಾಡಿರುತ್ತಾರೆ. ನನ್ನ ಮಗಳಾದ ಸ್ವಾತಿಯ ವಿದ್ಯಾಭ್ಯಾಸದ ಖರ್ಚನ್ನು ಸಹ ನಾನೇ ನೋಡಿಕೊಂಡಿದ್ದು, ಈಗ ನನ್ನ ಮಗಳ ವಿದ್ಯಾಭಾಸ ಮುಕ್ತಾಯಗೊಂಡು ಅವಳು ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾಳೆ.

2. ನನ್ನ ತಂದೆಗೆ ಕ್ಯಾನ್ಸರ್ ಕಾಯಿಲೆ ಇದ್ದು, ಅವರ ಚಿಕಿತ್ಸೆ ಗೆ ನಾನು 10,00,000/- ರೂಪಾಯಿ ಖರ್ಚು ಮಾಡಿರುತ್ತೇನೆ. ನನ್ನ ಅಣ್ಣನಾದ ಚಂದ್ರೇಗೌಡ ಹೃದ್ರೋಗ ಸಂಬಂಧಿ

ಕಾಯಿಲೆ ಹಾಗೂ ಪಾಶುವಾಯು ಇದ್ದು, ಅವರ ಹೃದಯದ ಶಸ್ತ್ರ ಚಿಕಿತ್ಸೆಗೆ ಮತ್ತು ಅವರ ಇತರೆ ಚಿಕಿತ್ಸೆಗಗಳಿಗೆ ನಾನೇ ನನ್ನ ಹಣವನ್ನು ಖರ್ಚು ಮಾಡುತ್ತಿದ್ದೇನೆ.

3. ನನ್ನ ಮಗನಾದ ಮಹೇಶ ನನ್ನೊಂದಿಗೆ ಇದ್ದು, ನಾನು ಅವನಿಗೆ ಎಮ್.ಸಿ.ಎ. ಓದಿಸುತ್ತಿದ್ದೇನೆ. ಮಹೇಶನ ವಿದ್ಯಾಭ್ಯಾಸಕ್ಕೆ 1 ವರ್ಷಕ್ಕೆ 2,50,000/- ರೂಪಾಯಷ್ಟು ಖರ್ಚಾಗುತ್ತದೆ. ನನ್ನ ತಾಯಿಯಾದ ಮಾಯಮ್ಮರವರು ಸಹ ಜೀವನಾಂಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ನಾನು ನನ್ನತಾಯಿಗೂ ಸಹ ಪ್ರತಿ ತಿಂಗಳಿಗೆ 8,000/- ಜೀವನಾಂಶ ಕೊಡುತ್ತಿದ್ದೇನೆ.

4. ಅರ್ಜಿದಾರರು ಮನೆಯಲ್ಲಿಯೇ ಟೈಲರಿಂಗ್ ಮಾಡುತ್ತಾರೆ. ನನ್ನ ಮಕ್ಕಳ ವಿದ್ಯಾಭ್ಯಾಸ, ನನ್ನ ತಂದೆ ಮತ್ತು ನನ್ನ ಅಣ್ಣನ ವೈದ್ಯಕೀಯ ಖರ್ಚುಗಳಿಗೆ ನಾನು 10-15 ಲಕ್ಷ ರೂಪಾಯಿ ಸಾಲ ಮಾಡಿದ್ದು, ಸಾಲಗಾರನಾಗಿರುತ್ತೇನೆ. ನನಗೆ ಇಷ್ಟೆಲ್ಲಾ ತೊಂದರೆ ಇದ್ದರು ಸಹ ಅರ್ಜಿದಾರಿಗೆ ತಿಂಗಳಿಗೆ ತಪ್ಪದೇ 8,000/- ಜೀವನಾಂಶವನ್ನು ಕೊಡುತ್ತಿದ್ದು, ಅಷ್ಟೇ ಮೊತ್ತದ ಜೀವನಾಂಶವನ್ನು ಕೊಡಲು ಮುಂದುವರೆಸುತ್ತೇನೆ. ನನಗೆ ಮೇಲೆ ಹೇಳಿದ ರೀತಿಯಲ್ಲಿ ಇತರೆ ಜವಾಬ್ದಾರಿಗಳು ಇದ್ದ ಕಾರಣ, ನನ್ನ ಬರುವ ಆದಾಯದಲ್ಲಿ ಅರ್ಜಿದಾರರಿಗೆ 8,000/- ಗಿಂತ ಜಾಸ್ತಿ ಜೀವನಾಂಶವನ್ನು ಕೊಡಲು ನಾನು ಅಶಕ್ತನಾಗಿರುತ್ತೇನೆ. ಆದ್ದರಿಂದ ಈ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಕ್ರಿಮಿನಿಲ್ ಮಿಸ್ ನಂ.170/2019 ರ ಆದೇಶದ ದೃಢಿಕೃತ ನಕಲನ್ನು ನಿಆರ್.1 ಎಂದು ಗುರುತಿಸಲಾಯಿತು.

**ಎದುರುದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**